MVC No.530/2022
PW-1 ಕೋಟಿ @ ಸಣ್ಣ ಈರಪ್ಪ
Date: 05.12.2024

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು 2 ನೇ ಎದುರುದಾರರ ಪರ ವಕೀಲರಿಂದಃ**

ನಾನು 5 ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಸ್ವಂತ ಊರು ಮದ್ದನಕುಂಟ ಗ್ರಾಮ, ಮಡಕಶಿರಾ ತಾಲ್ಲೂಕು, ಆಂಧ್ರಪ್ರದೇಶ ರಾಜ್ಯ. ನಾನು ಯಾವುದೇ ಕೆಲಸ ಮಾಡುತ್ತಿದ್ದೇನೆ. ಅಪಘಾತವನುನ ನಾನು ಕಣ್ಣಾರೆ ಕಂಡಿರುವುದಿಲ್ಲ. ಅಪಘಾತವಾದ ಸಮಯದಲ್ಲಿ ನನ್ನ ಹೆಂಡತಿ ಸಪೋಟ ಟಿವಿಎಸ್ ಎಕ್ಸ್ ಎಲ್ ವಾಹನದಲ್ಲಿ ಹೋಗುತ್ತಿದ್ದರು. ಅವರು ಗೌರಸಮುದ್ರ ಗ್ರಾಮದಿಂದ ಮದ್ದನಕುಂಟ ಗ್ರಾಮಕ್ಕೆ ಹೋಗುತ್ತಿದ್ದರು. ಸದರಿ ವಾಹನ ನನ್ನ ಸಂಬಂದಿಕರಾದ ಮಂಜು ರವರ ಹೆಸರಿನಲ್ಲಿ ಇದೆ. ಸದರಿ ವಾಹನದಲ್ಲಿ ನನ್ನ ಹೆಂಡತಿ, ಆಕೆಯ ಅಣ್ಣ ರಾಮು ಮತ್ತು ನನ್ನ ಮಗ ಹೋಗುತ್ತಿದ್ದರು.

ನನ್ನ ಹೆಂಡತಿಗೆ ವಾಹನ ಚಾಲನೆ ಮಾಡಲು ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಟಿ ವಿ ಎಕ್ಸ್ ಎಲ್ ವಾಹನಕ್ಕೆ ಯಾವುದೇ ನೊಂದಣಿ ಆಗಿರಲಿಲ್ಲ ಎಂದರೆ ಸಾಕ್ಷಿ ಅದು ಹೊಸ ಗಾಡಿ ಆಗಿತ್ತು ಎಂದು ನುಡಿದಿರುತ್ತಾರೆ. ಅಪಘಾತವಾದ ಸ್ಥಳ ಆಲದಹಳ್ಳಿ ಗೇಟ್ ಆಗಿರುತ್ತದೆ. ಆಲದಹಳ್ಳಿ ಗೇಟ್ ರಸ್ತೆ ರಾಷ್ಟ್ರೀಯ ಹೆದ್ದಾರಿಗೆ ಸೇರುತ್ತದೆ ಎಂದರೆ ಸರಿ. ಸ್ಥಳದಲ್ಲಿ ನನ್ನ ಹೆಂಡತಿ ಯಾವುದೇ ಸಿಗ್ನಲ್ ನೀಡದೆ ಏಕಾ ಏಕಿ ಆಲದಹಳ್ಳಿ ಗೇಟ್ ಬಳಿ ತಿರುವು ತೆಗೆದಕೊಂಡಳು ಎಂದರೆ ಸರಿಯಲ್ಲ. ಆಕೆಗೆ ಯಾವುದೇ ಚಾಲನಾ ಪರವಾನಿಗೆ ಪತ್ರ ಇಲ್ಲದೆ ಮೂರು ಜನರು ಸದರಿ ವಾಹನದಲ್ಲಿ ಪ್ರಯಾಣಿಸಿದ ಕಾರಣ ಆಕೆಗೆ ಆಯಾ ತಪ್ಪಿ ಆಕೆಯ ತಪ್ಪಿನಿಂದ ಅಪಘಾತ ಸಂಬವಿಸಿರುತ್ತದೆ ಎಂದರೆ ಸರಿಯಲ್ಲ. ಲಾರಿ ಚಾಲಕನ ತಪ್ಪಿನಿಂದ ಯಾವುದೇ ಅಪಘಾತ ಸಂಬವಿಸಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಎರಡನೇ ಎದುರುದಾರರು ಯಾವುದೇ ಪರಿಹಾರದ ಹಣವನ್ನು ಕೊಡುವ ಬಾದ್ಯಸ್ತಿಕೆಯನ್ನು ಹೊಂದಿರೆ ಎಂದರೆ ಸರಿಯಲ್ಲ.

ಅಪಘಾತವಾದಾಗ ನನ್ನ ಮಗನಿಗೆ 11 ವರುಷ ವಯಸ್ಸಾಗಿತ್ತು. ಆತ ವಿದ್ಯಾಭ್ಯಾಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆತ ಮೂರನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದನು. ನನ್ನ ಮಗ ಶಾಲೆಗೆ ಹೋಗುತ್ತಿದ್ದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.